# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1277**

**ಮಾನ್ಯ ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ : 17.12.2025**

**ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಸೇರಿದಂತೆ ರಾಜ್ಯದ 13 ಕಡೆ ಸ್ಥಾಪಿಸಲು ಉದ್ದೇಶಿಸಿದ್ದ 'ಪಶು ರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರಕ್ಕೆ ಅನುದಾನ ದೊರೆಯದೆ ಕಟ್ಟಡ ನಿರ್ಮಾಣ ಕಾರ್ಯ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | RIDF ಯೋಜನೆಯ ಟ್ರಾಂಚ್-28ರಡಿಯಲ್ಲಿ ಮಂಡ್ಯ ಸೇರಿದಂತೆ ರಾಜ್ಯದ 13 ಕಡೆ ಪಶು ರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರ ಸ್ಥಾಪಿಸಲು ಮಂಜೂರಾತಿ ದೊರೆತಿದ್ದು, RIDF ಯೋಜನೆಯಡಿ ಬಿಡುಗಡೆಯಾಗುವ ಅನುದಾನವನ್ನು ನಿರ್ಮಾಣ ಸಂಸ್ಥೆಗೆ ಬಿಡುಗಡೆ ಮಾಡಲಾಗಿದ್ದು ಅದರಲ್ಲಿ 5 ಸ್ಥಳಗಳಲ್ಲಿ ನಾಗರೀಕ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 8 ಸ್ಥಳಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. |
| ಆ) | ಬಂದಿದ್ದಲ್ಲಿ, ಈ ಕೇಂದ್ರ ಸ್ಥಾಪನೆಗೆ ಅವಶ್ಯ ಅನುದಾನ ಒದಗಿಸಿ, ಕಟ್ಟಡ ನಿರ್ಮಾಣ ಪೂರ್ಣಗೊಳಿಸಿ, ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು; (ವಿವರವಾದ ಮಾಹಿತಿ ನೀಡುವುದು) | ಕರ್ನಾಟಕ ಸ್ಟೇಟ್ ಹ್ಯಾಬಿಟೇಟ್ ಸೆಂಟರ್, ಬೆಂಗಳೂರು ರವರಿಗೆ RIDF ಯೋಜನೆಯಡಿ ಕಾಮಗಾರಿ ಕೈಗೊಳ್ಳಲು ಬಿಡುಗಡೆಯಾದ ಅನುದಾನದಲ್ಲಿ ಪ್ರಯೋಗಾಲಯ ಕಾಮಗಾರಿಗಳಿಗೆ ರೂ.663.1 ಲಕ್ಷಗಳು ವೆಚ್ಚ ಮಾಡಲಾಗಿದ್ದು, ಪ್ರಯೋಗಾಲಯದ ಕಾಮಗಾರಿಗೆ ಒಟ್ಟಾರೆ ಅಗತ್ಯ ಇರುವ ಅನುದಾನದಲ್ಲಿ ಕಟ್ಟಡವನ್ನು ಪೂರ್ಣಗೊಳಿಸಿ ರೈತರಿಗೆ ಪಶುವೈದ್ಯಕೀಯ ಪ್ರಯೋಗಾಲಯದ ಸೇವೆಯನ್ನು ನೀಡಲಾಗುತ್ತದೆ. |
| ಇ) | 'ಪಶು ರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರ'ದ ಕಟ್ಟಡ ನಿರ್ಮಾಣದ ಹೊಣೆಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ; ಒಟ್ಟು ಯೋಜನಾ ವೆಚ್ಚ ಎಷ್ಟು; ಇದರಲ್ಲಿ ಪ್ರತಿ ಕೇಂದ್ರಕ್ಕೆ ನಿಗದಿಪಡಿಸಿದ ಮೊತ್ತ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು). | ಪಶುರೋಗ ತನಿಖಾ ಪ್ರಯೋಗಾಲಯದ ನೂತನ ಕಟ್ಟಡ ನಿರ್ಮಾಣ ಮಾಡಲು ಕರ್ನಾಟಕ ಸ್ಟೇಟ್ ಹ್ಯಾಬಿಟೇಟ್ ಸೆಂಟರ್, ಬೆಂಗಳೂರು ನಿರ್ಮಾಣ ಸಂಸ್ಥೆಗೆ ವಹಿಸಲಾಗಿರುತ್ತದೆ.<br><br>13 ಜಿಲ್ಲಾ ಪ್ರಾಣಿ ಪ್ರಯೋಗಾಲಯ ನೂತನ ಕಟ್ಟಡದ ಯೋಜನಾ ಮೊತ್ತ ನಾಗರಿಕ ಕಾಮಗಾರಿ ಮತ್ತು ಪ್ರಯೋಗಾಲಯಕ್ಕೆ ಅಗತ್ಯ ಇರುವ ಉಪಕರಣಗಳು ಸೇರಿ ಒಟ್ಟು ಯೋಜನಾ ಮೊತ್ತ ರೂ:2362.96 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಪ್ರತಿ ಕೇಂದ್ರಕ್ಕೆ ನಿಗಧಿಪಡಿಸಿದ ಮೊತ್ತದ ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ. |

| | | |
|---|---|---|
| ಈ) | ಮಂಡ್ಯ ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲೂ ನಿವೇಶನವನ್ನು ಸಂಬಂಧಪಟ್ಟವರಿಗೆ ಹಸ್ತಾಂತರಿಸಿದ್ದಾರೆಯೇ? ಅನುದಾನ ಜೊತೆಗೆ ಬೇರೆ ಯಾವ ಕಾರಣಗಳಿಗಾಗಿ ಕಟ್ಟಡ ನಿರ್ಮಾಣ ಕಾಮಗಾರಿ ಕೆಲಸವು ನೆನೆಗುದಿಗೆ ಬಿದ್ದಿದೆ; (ಜಿಲ್ಲಾವಾರು ಸೂಕ್ತ ಕಾರಣಗಳನ್ನು ನೀಡುವುದು) | ಮಂಡ್ಯ ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲೂ ನಿವೇಶನವನ್ನು ಸಂಬಂಧಪಟ್ಟವರಿಗೆ ಹಸ್ತಾಂತರಿಸಲಾಗಿದೆ.<br><br>5 ಕಟ್ಟಡ ಕಾಮಗಾರಿಗಳು ಸಂಪೂರ್ಣವಾಗಿದ್ದು, ಇನ್ನುಳಿದ 08 ಕಟ್ಟಡ ನಿರ್ಮಾಣದ ಕಾಮಗಾರಿಯು ಪ್ರಗತಿಯಲ್ಲಿವೆ. |
| ಉ) | 'ಪಶು ರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರ'ದಲ್ಲಿ ಏನೆಲ್ಲಾ ಸೌಲಭ್ಯಗಳು ಇರಲಿವೆ; ಏನೆಲ್ಲಾ ಕಾಯಿಲೆಗಳನ್ನು ಪತ್ತೆ ಹಚ್ಚಿ ಚಿಕಿತ್ಸೆಯನ್ನು ಸಕಾಲದಲ್ಲಿ ಒದಗಿಸಲು ಅನುಕೂಲವಾಗಲಿದೆ?<br>(ವಿವರವಾದ ಮಾಹಿತಿ ನೀಡುವುದು) | ಪಶು ರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರದಲ್ಲಿ ಈ ಕೆಳಕಂಡ ಸೌಲಭ್ಯಗಳು ಇರುತ್ತವೆ.<br>• ರಕ್ತ ಪರೀಕ್ಷೆ<br>• ಸೀರಂ ಮಾದರಿ ಪರೀಕ್ಷೆ<br>• ಸಗಣಿ, ಮಲ ಮತ್ತು ಮೂತ್ರ ಪರೀಕ್ಷೆ<br>• ಮರಣೋತ್ತರ ಪರೀಕ್ಷೆ<br>• ಲಸಿಕೆಗಳನ್ನು ಸಂಗ್ರಹಿಸುವುದು/ ವಿತರಿಸುವುದು<br>• ರೋಗೋದ್ರೇಕ ಹಾಗೂ ಹೊಸ ಖಾಯಿಲೆ ಉಲ್ಬಣದ ಸಂದರ್ಭದಲ್ಲಿ ಕ್ಷೇತ್ರಗಳಿಗೆ ಬೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸಿ ರೋಗ ನಿರ್ಣಯ ಕೈಗೊಂಡು ನುರಿತ ಪಶುವೈದ್ಯರಿಂದ ಚಿಕಿತ್ಸೆಗೆ ಸಲಹೆ ನೀಡುವುದು.<br>• ವೈರಾಣು ಖಾಯಿಲೆಗಳ ರೋಗ ನಿರ್ಣಯ<br>• ವಿಸ್ತರಣಾ ಚಟುವಟಿಕೆಗಳು<br>• ABST (ಆಂಟಿ ಬಾಡಿ ಸೆನ್ಸಿಟಿವಿಟಿ ಟೆಸ್ಟ್)<br>• Skin Scraping Test<br>• Toxicology Test<br>• ಹಾಲು ಮಾದರಿ ಪರೀಕ್ಷೆ<br>• ಕಂದುರೋಗ ಪರೀಕ್ಷೆ<br><br>ಮೇಲ್ಕಂಡ ಎಲ್ಲಾ ಪರೀಕ್ಷೆ / ಪ್ರಕ್ರಿಯೆಗಳಿಂದ ಇಲಾಖೆಯ ಪಶುವೈದ್ಯರಿಗೆ ನಿಖರವಾದ ರೋಗ ನಿರ್ಣಯ (Accurate Disease Daignosis) ಮಾಡಿ ಚಿಕಿತ್ಸಾ ವಿಧಾನ ಶೀಘ್ರವಾಗಿ ಲಭ್ಯವಾಗಿ ಜಾನುವಾರುಗಳಿಗೆ ಸೂಕ್ತ ಚಿಕಿತ್ಸೆ ಹಾಗೂ ರೋಗ ತಡೆಗಟ್ಟುವಿಕೆ ಸಾಧ್ಯವಾಗುತ್ತದೆ. |

**ಸಂಖ್ಯೆ:ಪಸಂಮೀ 279 ಸಲೆವಿ 2025**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1277 ಕ್ಕೆ

# ಅನುಬಂಧ

| ಕ್ರ. ಸಂ. | ಜಿಲ್ಲೆಯ ಹೆಸರು | ಜಿಲ್ಲಾ ಪ್ರಾಣಿ ಪ್ರಯೋಗಾಲಯದ ಹೆಸರು | ಮಂಜೂರಾದ ಮೊತ್ತ (ಕಟ್ಟಡ ಮತ್ತು ಪರಿಕರ ಖರೀದಿ) (ರೂ. ಲಕ್ಷಗಳಲ್ಲಿ) |
|---|---|---|---|
| 1 | ಹಾವೇರಿ | ಹಾವೇರಿ | 181.02 |
| 2 | ಚಾಮರಾಜನಗರ | ಚಾಮರಾಜನಗರ | 181.02 |
| 3 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 181.02 |
| 4 | ಚಿಕ್ಕಮಗಳೂರು | ಚಿಕ್ಕಮಗಳೂರು | 181.02 |
| 5 | ಚಿತ್ರದುರ್ಗ | ಚಿತ್ರದುರ್ಗ | 181.02 |
| 6 | ಹಾಸನ | ಹಾಸನ | 181.02 |
| 7 | ಕೊಡಗು | ಮಡಿಕೇರಿ | 181.02 |
| 8 | ಮಂಡ್ಯ | ಮಂಡ್ಯ | 181.02 |
| 9 | ಬೆಂಗಳೂರು (ಗ್ರಾ) | ದೇವನಹಳ್ಳಿ | 181.02 |
| 10 | ರಾಮನಗರ | ರಾಮನಗರ | 181.02 |
| 11 | ವಿಜಯನಗರ | ಹೊಸಪೇಟೆ | 182.66 |
| 12 | ಯಾದಗಿರಿ | ಯಾದಗಿರಿ | 182.66 |
| 13 | ಉಡುಪಿ | ಉಡುಪಿ | 187.44 |
|  | ಒಟ್ಟು |  | **2362.96** |